ವಾಗಿ ಯೋಗಿಯ ಬಳಿಯೇ ನೆಲಸಬೇಕೆಂದು ಇಚ್ಛಿಸಿದನು. ಆದರೆ ಆ ಯೋಗಿಯು ಯಾರನ್ನೂ ತನ್ನ ಬಳಿ ಹೆಚ್ಚು ಕಾಲ ನಿಲ್ಲಲು ಬಿಡುತ್ತಿರಲಿಲ್ಲ. ಇದರಿಂದ ನಿರಾಶನಾಗಿ ಹರ್‌ಭಜನ್‌ದಾಸನು ಹಿಂದಿರುಗಬೇಕಾಯಿತು. ಹೊರಡುವ ಮುನ್ನ ಯೋಗಿಯು, "ನೀನು ಮಹಾಯೋಗಿಯಾಗುವೆ. ಪ್ರಸ್ತುತ ನಿನಗೆ ಸರಿಸಮಾನನಾದ ಯೋಗಿಯು ಮತ್ತೊಬ್ಬರು ಇರಲಾರರು" ಎಂದು ಆಶೀರ್ವದಿಸಿ ಕಳುಹಿಸಿದನು.

ತೀರ್ಥಯಾತ್ರೆಯ ಸಮಯದಲ್ಲಿ ಹರಭಜನ್‌ದಾಸ್ ಹಿಮಾಲಯದಲ್ಲಿ ಮತ್ತೊಬ್ಬ ಮಹಾನ್ ಸಾಧುವನ್ನು ಕಂಡು ಅವರ ಸೇವೆಗೈದನು. ಸಂತುಷ್ಟನಾದ ಆ ಸಾಧುವು ಕೆಲವು ಗಿಡಮೂಲಿಕೆಗಳನ್ನು ಹರ್‌ಭಜನ್‌ದಾಸನಿಗೆ ತಿನ್ನಲು ನೀಡಿದರು. ಇದನ್ನು ಸೇವಿಸುವ ವ್ಯಕ್ತಿಯು ದೀರ್ಘಕಾಲ ಅನ್ನನೀರಿಲ್ಲದೆ ಬದುಕುವ ಶಕ್ತಿಯನ್ನು ಪಡೆಯುತ್ತಾನೆ. ಈ ಶಕ್ತಿಯನ್ನು ಪಡೆದ ಹರ್‌ಭಜನ್‌ದಾಸನು ಸ್ವಲ್ಪ ಕಾಲ ಸಾಧನೆ, ಭಜನೆ ಮತ್ತು ಅಧ್ಯಯನದಲ್ಲಿ ತಲ್ಲೀನನಾಗಿ ಹಲವಾರು ತೀರ್ಥಕ್ಷೇತ್ರಗಳನ್ನು ಸಂದರ್ಶಿಸಿದನು. ಪುನಃ ಗಾಜಿಪುರ್ ಬಳಿಯಲ್ಲಿದ್ದ ತನ್ನ ಆಶ್ರಮಕ್ಕೆ ಮರಳಿದನು. ಆಶ್ರಮವಾಸಿಗಳು ಮತ್ತು ಸಹಪಾಠಿಗಳು ಇವನನ್ನು ಕಂಡು ಆಶ್ಚರ್ಯಚಕಿತರಾದರು. ಕಾರಣ ಹರ್‌ಭಜನ್‌ದಾಸನ ಮುಖದಲ್ಲಿ ದಿವ್ಯಪ್ರಭೆಯು ಎದ್ದು ಕಾಣುತ್ತಿತ್ತು. ಉಪನಿಷತ್ತುಗಳ ಕಥೆಯಲ್ಲಿ ಬರುವ ಸತ್ಯಕಾಮನಂತೆ ಅವನು ತೋರುತ್ತಿದ್ದನು. ಮೊದಲು ಅಪಹಾಸ್ಯ ಮಾಡುತ್ತಿದ್ದ ಆತನ ಸಹಪಾಠಿಗಳು ಈಗ ಅವನನ್ನು ಗೌರವದಿಂದ ಕಾಣಲು ಪ್ರಾರಂಭಿಸಿದರು.

ಮತ್ತೊಮ್ಮೆ ಹರ್‌ಭಜನ್‌ದಾಸರು ಶ್ರೀರಘುವೀರನ ಪೂಜೆ, ಆಶ್ರಮದ ಮೇಲ್ವಿಚಾರಣೆ ಮತ್ತು ಅತಿಥಿಗಳ ಸೇವೆ ಮುಂತಾದ ಆಶ್ರಮದ ಕಾರ್ಯಗಳನ್ನು ಪ್ರಾರಂಭಿಸಿದರು. ಆದರೆ ಕೆಲವೊಮ್ಮೆ ಅನೇಕ ದಿವಸಗಳ ಕಾಲ ಹೊರಗೆ ಬರದೆ, ಅನ್ನನೀರಿಲ್ಲದೆ ಸಾಧನೆಯನ್ನು ಮಾಡುತ್ತಿದ್ದರು; ದಿನಗಟ್ಟಲೆ ಬಿಲದಲ್ಲಿ ಕುಳಿತು ತಪಸ್ಸನ್ನು ಆಚರಿಸುತ್ತಿದ್ದರು. ಆದ್ದರಿಂದ ಹಳ್ಳಿಗರು ಇವರನ್ನು 'ಪವಾಹಾರಿ ಬಾಬಾ' (ಗಾಳಿಯನ್ನು ಸೇವಿಸಿ ಜೀವಿಸುವ ಸಂತ) ಎಂದು ಕರೆಯಲು ಪ್ರಾರಂಭಿಸಿದರು. ಈಗ ಅವರ (ಇನ್ನು ಮುಂದೆ ಅವರನ್ನು ಪವಾಹಾರಿ ಬಾಬಾ ಎಂದು ಕರೆಯೋಣ) ರೀತಿನೀತಿಗಳಲ್ಲಿ ಬಹುತೇಕ ಬದಲಾವಣೆ ಕಂಡುಬಂದವು. ಯಾವುದೇ ಜೀವಂತ ಪ್ರಾಣಿಯನ್ನು ಅವರು 'ಬಾಬಾ' ಎಂದೂ, ಸ್ತ್ರೀಯರನ್ನು 'ಮಾತಾಜಿ' ಎಂದೂ ಕರೆಯುತ್ತಿದ್ದರು. ತಮ್ಮನ್ನು ತಾವು 'ದಾಸ'ನೆಂದು ಕರೆದುಕೊಳ್ಳುತ್ತಿದ್ದರು. **'ಸರ್ವಂ ವಿಷ್ಣುಮಯಂ'** ಎಂಬುದು ಅವರ ಪಾಲಿಗೆ ಸಾಕ್ಷಾತ್ ಅನುಭವದ ವಿಷಯವಾಗಿತ್ತು.

ಒಮ್ಮೆ ಒಂದು ನಾಗರಹಾವು ಇವರನ್ನು ಕಚ್ಚಿತು. ಪ್ರಜ್ಞಾಹೀನರಾದ ಇವರನ್ನು ಸತ್ತೇ ಹೋದರು ಎಂದು ಇತರರು ಭಾವಿಸಿದರು. ಆಶ್ಚರ್ಯದ ವಿಷಯವೆಂದರೆ, ಕೆಲವು ಗಂಟೆಗಳ ಬಳಿಕ ಅವರು ಎದ್ದುನಿಂತರು. ಆಶ್ರಮದವರು ಸಂತೋಷದ ಜೊತೆಗೆ ಆಶ್ಚರ್ಯ ವ್ಯಕ್ತಪಡಿಸಿದರು. ಆಗ ಬಾಬಾ ಆ ನಾಗರಹಾವು, ತಮ್ಮ ಪ್ರಿಯತಮನ (ಇಷ್ಟದೇವ) ದೂತನೆಂದು ಹೇಳಿದರು. ಅದಲ್ಲದೆ, "ಇಲಿ ಬಾಬಾ ಈ ದಾಸನ ಪಂಚೆಯನ್ನು ಹೊಕ್ಕಿ ಆಶ್ರಯವನ್ನು ಪಡೆಯಿತು. ಆಹಾರಕ್ಕೆಂದು ಬಂದ 'ನಾಗರ ಬಾಬಾ' ಕೋಪದಿಂದ ಈ ದಾಸನ ಭುಜವನ್ನು ಕಚ್ಚಿತು" ಎಂದರು. **'ಉದಾರಚರಿತಾನಾಂ ತು ವಸುಧೈವ ಕುಟುಂಬಕಂ'** – ಉದಾರಚರಿತರಾದವರಿಗೆ ಇಡೀ ಪ್ರಪಂಚವೇ ಕುಟುಂಬ ಎಂಬ ಸೂಕ್ತಿಯಂತೆ, ಅವರ ಮನಸ್ಸು ಎಲ್ಲ ಜೀವಿಗಳಲ್ಲಿಯೂ ಶತ್ರುತ್ವವನ್ನು ಕಳೆದುಕೊಂಡು, ವಿಶಾಲವಾದ ಮನಸ್ಸನ್ನು ಹೊಂದಿತ್ತು. ಪತಂಜಲಿ ಮಹರ್ಷಿಗಳು **'ತತ್ ಸನ್ನಿಧೌ ವೈರತ್ಯಾಗಃ'** ಅಂದರೆ 'ಅವರ (ಯೋಗಿಗಳ) ಸನ್ನಿಧಿಯಲ್ಲಿ ಯಾವ ಬಗೆಯ ವೈರತ್ವವೂ ಇರುವುದಿಲ್ಲ' ಎಂದು ತಮ್ಮ ಒಂದು ಯೋಗಸೂತ್ರದಲ್ಲಿ ಹೇಳುತ್ತಾರೆ. ಇದಕ್ಕೆ ಸಾಕ್ಷಿಯೆಂಬಂತೆ, ಬಾಬಾ ವಾಸಿಸುತ್ತಿದ್ದ ಬಿಲದಲ್ಲಿ ಹಾವು ಮತ್ತು ಇಲಿಗಳು ಅನ್ಯೋನ್ಯವಾಗಿ ಜೀವಿಸುತ್ತಿದ್ದವು. ಬಾಬಾ ದೇಹವನ್ನು ತ್ಯಜಿಸಿದ ದಿನದಂದು ಜನರು ಅವರ ಗುಹೆಯೊಳಗೆ ಇಳಿದು ಹೋಗಿ ನೋಡಿದಾಗ, ಇಲಿ ಮತ್ತು ನಾಗರಹಾವು ಒಂದೇ ಬಟ್ಟಲಿನಿಂದ ಹಾಲನ್ನು ಕುಡಿಯುತ್ತಿದ್ದುದನ್ನು ಕಂಡು ಬೆರಗಾದರು.


ಒಮ್ಮೆ ಕಳ್ಳನೊಬ್ಬನು ಆಶ್ರಮದ ಪಾತ್ರೆಗಳು, ದೇವರ ವಿಗ್ರಹ ಮತ್ತು ಆಭರಣಗಳನ್ನು ಕದಿಯುತ್ತಿದ್ದಾಗ ಬಾಬಾ ಬಂದಿದ್ದನ್ನು ಕಂಡು ಹೆದರಿ ಓಡಿಹೋದನು. ಪವಾಹಾರಿ ಬಾಬಾ ಕಳ್ಳನನ್ನು ಹಿಂಬಾಲಿಸುತ್ತ, 'ಹೇ ಬಾಬಾ, ಈ ವಸ್ತುಗಳು ನಿಮಗೆ ಬೇಕಾಗಿದ್ದಲ್ಲಿ, ಅವು ನಿಮ್ಮದೇ. ಇವುಗಳನ್ನು ಏಕೆ ಬಿಟ್ಟು ಹೋಗುತ್ತಿದ್ದೀರಿ? ಈ ಸೇವಕನಿಂದ ಅಪಚಾರವೇನಾದರೂ ಉಂಟಾಯಿತೇ? ಇವು ನಿಮಗೇ ಸೇರಿದ್ದು. ದಯವಿಟ್ಟು ಇವನ್ನು ತೆಗೆದುಕೊಂಡು ಹೋಗಿ" ಎಂದು ಕೂಗಿಹೇಳಿದರು. ಇವರ ಈ ಸಾಧುಸ್ವಭಾವವನ್ನು ಕಂಡ ಕಳ್ಳನು ಪರಿವರ್ತನೆಗೊಂಡು ಮುಂದೆ ತಾನೇ ಒಬ್ಬ ಒಳ್ಳೆಯ ಸಾಧುವಾದನು. ಈ ಸಾಧುವನ್ನು ಸ್ವಾಮಿ ವಿವೇಕಾನಂದರು ಮುಂದೆ ತಮ್ಮ ಪರಿವ್ರಾಜಕ ದಿನಗಳಲ್ಲಿ ಭೇಟಿಯಾದರು. ಹೀಗೆ ಪವಾಹಾರಿ ಬಾಬಾ ಪಾಲಿಗೆ, **'ಈಶಾವಾಸ್ಯಮಿದಂ ಸರ್ವಂ'** – ಜಗತ್ತೆಲ್ಲವನ್ನೂ ಭಗವಂತನಿಂದ ಆವರಿಸಿಬಿಡಬೇಕು ಎಂಬ ಈಶಾವಾಸ್ಯ ಉಪನಿಷತ್ತಿನ ಮಾತು ಅನುಷ್ಠಾನದ ವಿಷಯವಾಗಿತ್ತು. ಹೀಗೆಂದೇ ಅವರು ಇಲಿ, ಹಾವು, ಕಳ್ಳ – ಎಲ್ಲರಲ್ಲೂ ಭಗವಂತನ ಪ್ರತಿಸ್ವರೂಪವನ್ನೇ ನೋಡುತ್ತಿದ್ದರು.

ಆಶ್ರಮದಲ್ಲಿ ಬಾಬಾ ಪ್ರತಿನಿತ್ಯವೂ ಭಗವಂತನಿಗೆ ನೈವೇದ್ಯವನ್ನು ನೀಡುವುದು, ಅತಿಥಿಗಳ ಸತ್ಕಾರ ಮಾಡುವುದು – ಇವನ್ನಲ್ಲದೆ, ಧಾರ್ಮಿಕ ಗ್ರಂಥಗಳ ಪ್ರವಚನವನ್ನೂ ನಡೆಸುತ್ತಿದ್ದರು. ಮಧ್ಯಾಹ್ನ ಆಶ್ರಮದ ಸಮೀಪದಲ್ಲಿದ್ದ ಒಂದು ಮುಳ್ಳಿನ ಪೊದೆಯನ್ನು ಹೊಕ್ಕು ಧ್ಯಾನ ಮಾಡುತ್ತಿದ್ದರು. ಇಡೀ ರಾತ್ರಿ ಗಂಗೆಯ ದಡದ ಬಳಿ ಯೋಗಾಭ್ಯಾಸದಲ್ಲಿ ನಿರತರಾಗಿರುತ್ತಿದ್ದರು. ಮುಂಜಾನೆ ಪುನಃ ಆಶ್ರಮದಲ್ಲಿ ತಮ್ಮ ಸೇವಾಕಾರ್ಯಗಳನ್ನು ಪ್ರಾರಂಭಿಸುತ್ತಿದ್ದರು. ಅಡುಗೆಯಲ್ಲಿ ಪ್ರವೀಣರಾದ ಬಾಬಾ, ರುಚಿಯಾದ ತಿನಿಸುಗಳನ್ನು ಮಾಡಿ ಎಲ್ಲರಿಗೂ ಪ್ರೀತಿಯಿಂದ ಉಣಬಡಿಸುತ್ತಿದ್ದರು. ಆದರೆ ತಾವು ಮಾತ್ರ ಸ್ವಲ್ಪ ಹಾಲು ಮತ್ತು ಕೆಂಪು ಮೆಣಸಿನ ರಸವನ್ನು ಕುಡಿಯುತ್ತಿದ್ದರು. ಒಮ್ಮೊಮ್ಮೆ ಬರೀ ಬಿಲ್ವದ ರಸವನ್ನು ಮಾತ್ರವೇ ಕುಡಿಯುತ್ತಿದ್ದರು.

(ಮುಂದುವರಿಯುವುದು)

# ಸ್ವಾಮಿ ಶಾರದಾನಂದರ ನೆನಪುಗಳು

ಸ್ವಾಮಿ ಶಾರದೇಶಾನಂದ



**ಸ್ವಾಮಿ ಶಾರದೇಶಾನಂದರು ೧೯೧೫ರಲ್ಲಿ ಶ್ರೀಶಾರದಾದೇವಿಯವರ ದರ್ಶನವನ್ನು ಮೊದಲ ಬಾರಿಗೆ ಪಡೆದುಕೊಂಡರು. ಪ್ರಥಮ ಭೇಟಿಯ ದಿನವೇ ಶ್ರೀಮಾತೆ ಅವರಿಗೆ ಉಪದೇಶವಿತ್ತರು. ಸ್ವಾಮಿಗಳು ಹೀಗೆ ಶ್ರೀಮಾತೆಯವರ ವಿಶೇಷ ಕೃಪೆಗೆ ಪಾತ್ರರಾಗಿದ್ದರು. ಅವರ ಸೇವೆಯನ್ನು ಹಲವು ವರ್ಷಗಳು ಮಾಡಿದರು. ಅದರಿಂದಲೋ ಏನೊ ಅವರಿಗೆ ಈ ಸಂನ್ಯಾಸ ನಾಮವನ್ನು ಸ್ವಾಮಿ ಶಿವಾನಂದರು ಕೊಟ್ಟರೆಂದು ತೋರುವುದು. ಶ್ರೀಶಾರದಾದೇವಿಯವರ ನೆನಪುಗಳನ್ನು ಬರೆದಿಡುವ ಮೂಲಕ ಅವರು ಎಲ್ಲ ಭಕ್ತರ ಕೃತಜ್ಞತೆಗೆ ಪಾತ್ರರಾಗಿರುವರು. ಶ್ರೀರಾಮಕೃಷ್ಣರ ಪ್ರತ್ಯಕ್ಷ ಶಿಷ್ಯರಲ್ಲಿ ಒಬ್ಬರಾದ ಸ್ವಾಮಿ ಶಾರದಾನಂದರನ್ನು ಕುರಿತ ಅವರ ನೆನಪುಗಳು ಕೂಡ ಭಕ್ತಿ, ಕೃತಜ್ಞತೆ ಮತ್ತು ಶ್ರದ್ಧೆಗಳಿಂದ ಕೂಡಿವೆ. ಇವನ್ನು ಸರಳವಾಗಿ ಕನ್ನಡಕ್ಕೆ ಅನುವಾದಿಸಿರುವ ಡಾ. ಇ. ವಸಂತಕುಮಾರ್ ಅವರು ಮೈಸೂರು ಆಶ್ರಮದ ಭಕ್ತರು. ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯದ ನಿವೃತ್ತ ಪ್ರಾಧ್ಯಾಪಕರು.**

ಭಗವಂತನ ಕೃಪೆಯಿಂದ, ಸ್ವಾಮಿ ಶಾರದಾನಂದರನ್ನು ಮೊದಲಬಾರಿ ಭೇಟಿಯಾಗುವ ಮತ್ತು ಭಗವಾನ್ ಶ್ರೀರಾಮಕೃಷ್ಣರ ಲೀಲಾಸಹಚರರಾದ ಶ್ರೀಮಾತೆ ಶ್ರೀಶಾರದಾ ದೇವಿಯವರ ಹಿರಿಮೆ ಗರಿಮೆಗಳನ್ನು ಅವರಿಂದ ಆಲಿಸುವ ಸುಯೋಗ ನನಗೆ ೧೯೧೩ ರಲ್ಲಿ ದೊರೆಯಿತು. ಇದನ್ನು ಕೇಳಿ, ನಾನು ಶ್ರೀಮಾತೆಯವರ ಬಗ್ಗೆ ಬಹಳ ಆಕರ್ಷಿತನಾದೆ. ಅವರನ್ನು ಭೇಟಿಯಾಗಲು, ಅವರ ಕೃಪಾಶೀರ್ವಾದಗಳನ್ನು ಪಡೆಯಲು ಅತೀವ ಕಾತುರನಾದೆ.

ಒಮ್ಮೆ ಭಕ್ತರೊಬ್ಬರು ದುಗುಡದಿಂದ, "ನಾನು ಬಹಳ ದುರ ದೃಷ್ಟಶಾಲಿ, ನನ್ನ ಜೀವನ ವ್ಯರ್ಥ, ನನ್ನ ಜನ್ಮ ನಿಷ್ಪ್ರಯೋಜಕ. ಏಕೆಂದರೆ ನಾನು ಶ್ರೀರಾಮಕೃಷ್ಣರನ್ನು ನೋಡಲಾಗಲಿಲ್ಲ" ಎಂದು ತಮ್ಮ ದುಃಖವನ್ನು ಸ್ವಾಮಿ ಶಾರದಾನಂದರಲ್ಲಿ ಹೇಳಿಕೊಳ್ಳು ತ್ತಿದ್ದರು. ಸ್ವಾಮಿಗಳು, "ನೀವು ಸಾಕಷ್ಟು ಅದೃಷ್ಟಶಾಲಿಗಳೆ. ಶ್ರೀಮಾತೆಯವರನ್ನು ನೋಡಿದ್ದೀರಿ. ಅವರ ಪಾದಗಳನ್ನು ಮುಟ್ಟಿ ಅವರ ಆಶೀರ್ವಾದವನ್ನು ಪಡೆದಿರುವಿರಿ. ಭಗವಾನ್ ಶ್ರೀರಾಮ ಕೃಷ್ಣರು ಮತ್ತು ಶ್ರೀಮಾತೆಯವರು ಇಬ್ಬರೂ ಒಂದೇ" ಎಂದು ಅವರಿಗೆ ಸಮಾಧಾನ ಹೇಳಿದರು. ಆಗ ಆ ಭಕ್ತರು, "ನನಗೆ ಶ್ರೀಮಾತೆಯವರಲ್ಲಿ ಅಂತಹ ನಂಬಿಕೆ ಇಲ್ಲ. ಅವರನ್ನು ಭಗ ವಂತನ ಅವತಾರ ಎಂದು ಭಾವಿಸಲಾರೆ" ಎಂದು ಉತ್ತರ ವಿತ್ತರು. ಆಗ ಸ್ವಾಮಿಗಳು ಅವರನ್ನು ಗದರಿಸಿ ಜೋರಾಗಿ ಹೀಗೆ ಕೇಳಿದರು: "ಏನು, ಸರ್ವಶಕ್ತನೂ ಜಗನ್ನಾಥನೂ ಆದ ಭಗ ವಂತನು ಬೀದಿಯ ಭಿಕ್ಷುಕನ ಮಗಳನ್ನು ವರಿಸಿದನೆಂದು ತಿಳಿ ದಿರಾ?" ದೃಢಸ್ವರದಿಂದ, ಸಂಪೂರ್ಣ ವಿಶ್ವಾಸದಿಂದ ನುಡಿದ ಈ ಮಾತುಗಳು ನನ್ನ ಮನಸ್ಸನ್ನು ಹೊಕ್ಕವು.

ಸ್ವಾಮಿ ಶಾರದಾನಂದರೊಡನೆ ನನ್ನ ಸಂಬಂಧ ನಿಕಟ ವಾದ ನಂತರ ಅವರ ಅಪಾರ ಶ್ರದ್ಧೆ, ಆಳವಾದ ಭಕ್ತಿ ಮತ್ತು ಯಾವ ಶ್ರಮವನ್ನೂ ಲೆಕ್ಕಿಸದೆ ಅವರು ಶ್ರೀಮಾತೆಯವರಿಗೆ ಸೇವೆ ಮಾಡುತ್ತಿದ್ದ ರೀತಿ – ಇವನ್ನು ನೋಡಿ ನಾನು ಸ್ತಂಭೀಭೂತನಾದೆ. ಅವರು ತಮ್ಮೆಲ್ಲ ಅನನುಕೂಲತೆಗಳನ್ನೂ ಬದಿಗೊತ್ತಿ, ಎಲ್ಲ ತೊಂದರೆಗಳನ್ನೂ ಮೌನವಾಗಿ ಸಹಿಸುತ್ತ, ಶ್ರೀಮಾತೆಯವರನ್ನು ಎಷ್ಟು ಚೆನ್ನಾಗಿ ನೋಡಿಕೊಳ್ಳಲು ಸಾಧ್ಯವೋ ಅಷ್ಟು ಚೆನ್ನಾಗಿ ನೋಡಿಕೊಳ್ಳಲು ಪ್ರಯತ್ನಿಸಿದರು. ಶ್ರೀಮಾತೆಯವರಿಗೆ ಪ್ರಣಾಮ ಮಾಡಲು ಯಾರಿಗಾದರೂ ಅನುಮತಿ ಕೊಡಬೇಕಾದರೆ ಸೂಕ್ಷ್ಮವಾಗಿ ಆಲೋಚಿಸಿ ಎಚ್ಚರದಿಂದ ನಿರ್ಧಾರ ಕೈಗೊಳ್ಳು ತ್ತಿದ್ದರು. ಅನುಮತಿ ಕೊಡುವ ಮೊದಲು ಅವರ ಯೋಗ್ಯತೆಯನ್ನು ಸಂಪೂರ್ಣವಾಗಿ ವಿಚಾರಿಸಿ ತಿಳಿದುಕೊಳ್ಳುತ್ತಿದ್ದರು. ಪ್ರತಿನಿತ್ಯ ಅವರು ಶ್ರೀಮಾತೆಯವರಿಗೆ ಪ್ರಣಾಮ ಮಾಡುವುದಕ್ಕೆ ಹೋಗುವ ಮೊದಲು, ಶ್ರೀಮಾತೆಗೆ ತಮ್ಮಿಂದ ಎಳ್ಳಷ್ಟೂ ಅನನು ಕೂಲವಾಗದಂತೆ ಎಚ್ಚರ ವಹಿಸುತ್ತಿದ್ದರು. ಅವರು ಶ್ರೀಮಾತೆ ಯವರ ಪಾದಗಳಿಗೆ ಅನನ್ಯ ಭಕ್ತಿಯಿಂದ ಸಾಷ್ಟಾಂಗ ಪ್ರಣಾಮ ಮಾಡುತ್ತಿದ್ದ ದೃಶ್ಯವು ಅನುಪಮವಾಗಿತ್ತು.

ಒಮ್ಮೆ ನಾನು ಶ್ರೀಮಾತೆಯವರ ಜನ್ಮಸ್ಥಳವಾದ ಜಯರಾಮ ಬಾಟಿಗೆ ಹೋಗಲು ಸ್ವಾಮಿಗಳ ಅನುಮತಿ ಕೋರಿದೆ. ಆ ಸಮಯದಲ್ಲಿ ಹೋದರೆ ನನಗೆ ಹಲವು ಅನನುಕೂಲಗಳು ಆಗುವುದರಿಂದ, ಸ್ವಲ್ಪ ಸಮಯ ಕಾದು ನಂತರ, ಹೆಚ್ಚು ಅನುಕೂಲವಾದ ಸಮಯದಲ್ಲಿ ಹೋಗಬಹುದೆಂದು ಅವರು ಹೇಳಿದರು. "ಶ್ರೀಮಾತೆಯವರು, ಈಗ ನಾನು ಅಲ್ಲಿಗೆ ಹೋಗ ಬಹುದೆಂದು ಹೇಳಿರುವರು" ಎಂದು ನಾನು ಹೇಳಿದೆ. ನನ್ನ

ಮುಖವನ್ನು ನೋಡಿ ನಗುತ್ತ ಅವರು ಹೇಳಿದರು, "ಅನೇಕ ವೇಳೆ ನನಗೇ ಅರ್ಥವಾಗುವುದಿಲ್ಲ, ಶ್ರೀಮಾತೆಯವರು ಹೇಳುವುದು ಅವರ ಇಚ್ಛೆಯೊ ಅಥವಾ ನನ್ನ ಇಚ್ಛೆ ಅವರ ಮೂಲಕ ವ್ಯಕ್ತವಾಗುತ್ತಿದೆಯೊ ಎಂಬುದು." ಇದನ್ನು ಕೇಳಿ ನನಗೆ ಬಹಳ ನಾಚಿಕೆ ಆಯಿತು. ಏಕೆಂದರೆ, ನಿಜವಾಗಿ, ಶ್ರೀಮಾತೆಯವರನ್ನು ನೋಡಲು ನಾನು ಆಸೆ ಪಡುತ್ತಿದ್ದೇನೆ ಮತ್ತು ಈಗಲೆ ಹೋಗಲು ಸಿದ್ಧವಾಗಿರುವೆನು ಎಂಬುದನ್ನು ನನ್ನಿಂದ ತಿಳಿದ ಶ್ರೀಮಾತೆಯವರು, ವಿಶ್ವಾಸದಿಂದ, ಕೇವಲ ನನ್ನ ಸಂತೋಷಕ್ಕಾಗಿ ಮಾತ್ರವೇ ಹಾಗೆ ಅನುಮತಿ ಕೊಟ್ಟಿದ್ದರು. ಶ್ರೀಮಾತೆಯವರ ಅಂತರಾಳವನ್ನು ತಿಳಿಯವುದರಲ್ಲಿ ಸ್ವಾಮಿಗಳಿಗೆ ಇದ್ದ ಅಸಾಧಾರಣ ಶಕ್ತಿಯನ್ನು ಅರಿತ ಮೇಲೆ ಅಂದಿನಿಂದ, ಅವರೊಂದಿಗೆ ಮಾತನಾಡುವಾಗ ಹೆಚ್ಚು ಎಚ್ಚರ ವಹಿಸಿದೆ.

ಆಧ್ಯಾತ್ಮಿಕ ಜೀವನದಲ್ಲಿ ನನಗೆ ಇದ್ದ ಆಸಕ್ತಿ ಮತ್ತು ನನ್ನ ಉದ್ದೇಶವನ್ನು ಅರಿತ ಸ್ವಾಮಿಗಳು, ದಯೆಯಿಂದ, ಸ್ವಲ್ಪ ಕಾಲ ಬೇಲೂರು ಮಠದಲ್ಲಿ ಇರುವಂತೆ ನನಗೆ ಹೇಳಿದರು. ನನ್ನನ್ನು ಸ್ವಲ್ಪ ಕಾಲ ಅಲ್ಲಿ ಇಟ್ಟುಕೊಳ್ಳುವಂತೆ ಬೇಲೂರು ಮಠದ ಮೇಲ್ವಿಚಾರಕ ಸ್ವಾಮಿಗಳಿಗೆ ಪರಿಚಯ ಪತ್ರವೊಂದನ್ನು, ಸ್ವಹಸ್ತಾಕ್ಷರದಲ್ಲಿಯೇ ಬರೆದು ನನ್ನನ್ನು ಅಲ್ಲಿಗೆ ಕಳುಹಿಸಿ ಕೊಟ್ಟರು. ಹೀಗೆ ನನ್ನ ಸಂನ್ಯಾಸ ಜೀವನ ಪ್ರಾರಂಭವಾಯಿತು.

ಒಮ್ಮೆ, ಶ್ರೀಮಾತೆಯವರು ಕಾಲವಾದ ನಂತರ, ಜಯರಾಮಬಾಟಿಯಲ್ಲಿ ಹೊಸ ದೇವಸ್ಥಾನ ನಿರ್ಮಾಣವಾಗುತ್ತಿದ್ದಾಗ, ನಾನು ಅಲ್ಲಿ ಒಬ್ಬ ಸಾಧಾರಣ ಕೆಲಸಗಾರನಾಗಿ ಹೋಗಿ ನೆಲೆಸಿದ್ದೆ. ಆ ಸಮಯದಲ್ಲಿ ಮಲೇರಿಯ ಜ್ವರದಿಂದ ಬಹಳವಾಗಿ ನರಳುತ್ತಿದ್ದೆ. ನನ್ನ ಆರೋಗ್ಯ ಸಂಪೂರ್ಣವಾಗಿ ಹದಗೆಟ್ಟಿತ್ತು. ಇದಲ್ಲದೆ ನನ್ನ ಜಠರ ಮತ್ತು ಯಕೃತ್ತು ಊದಿಕೊಂಡಿದ್ದವು. ರಕ್ತಹೀನತೆಯಿಂದ ದೇಹ ಕೃಶವಾಗಿತ್ತು. ಮಾನಸಿಕ ಅಸ್ಥಿರತೆ, ಜೊತೆಗೆ ಗಂಟಲಿನ ತೊಂದರೆ ಮತ್ತು ಎಡೆಬಿಡದ ಕೆಮ್ಮು ನನ್ನನ್ನು ಕಾಡುತ್ತಿದ್ದವು. ಎಲ್ಲರೂ ನನ್ನ ಬಗ್ಗೆ ಚಿಂತಿತರಾಗಿದ್ದರು. ನನ್ನಿಂದ ಎಲ್ಲರಿಗೂ ತೊಂದರೆ ಮತ್ತು ಆತಂಕ ಉಂಟಾಗಿತ್ತು. ಆದರೆ, ನಾನು ಸ್ವಾಮಿ ಶಾರದಾನಂದರನ್ನು ನೋಡಲು ಹೋದಾಗ, ನನ್ನ ಪರಿಸ್ಥಿತಿಯನ್ನು ನೋಡಿ ಅವರು ಮರುಗಿದರು. ಪ್ರೀತಿಪೂರ್ವಕ ಮೃದುಧ್ವನಿಯಿಂದ ನನ್ನನ್ನು ತಮ್ಮ ಬಳಿ ಇರುವಂತೆ ಹೇಳಿದರು. ನನ್ನ ಚಿಕಿತ್ಸೆ ಮತ್ತು ಆರೋಗ್ಯದ ಸುಧಾರಣೆಗಾಗಿ ಒಳ್ಳೆಯ ವ್ಯವಸ್ಥೆ ಮಾಡುವುದಾಗಿಯೂ ನುಡಿದರು. ಅಂದೇ ಒಬ್ಬ ಉತ್ತಮ ವೈದ್ಯರನ್ನು ಗೊತ್ತುಮಾಡಿದರು. ಅತ್ಯುತ್ತಮ ಔಷಧಿ ಮತ್ತು ಆಹಾರಕ್ಕೆ ವ್ಯವಸ್ಥೆ ಮಾಡಿದರು. ಅವರ ಸೇವಕರಾದ ಬ್ರ. ಕಿರಣ್ ಅವರಿಗೆ (ನಂತರ ಸ್ವಾಮಿ ಅಶೇಷಾನಂದ) ನನ್ನನ್ನು ನೋಡಿಕೊಳ್ಳುವಂತೆ ಹೇಳಿದರು. ಮೃದುಹೃದಯಿಯಾದ ಕಿರಣ್ ಶ್ರದ್ಧೆಯಿಂದ ನನ್ನ ಆರೈಕೆ ಮಾಡಿದರು. ಕ್ರಮೇಣ ನನ್ನ ಆರೋಗ್ಯ ಸುಧಾರಿಸಿತು. ಆದರೆ ಕೆಲವು ದಿನಗಳ ನಂತರ ನನಗೆ ಮತ್ತೆ ಜ್ವರ ಬಂದಿತು. ಇದರಿಂದ, ಪೂಜ್ಯ ಸ್ವಾಮಿಗಳಿಗೆ ನಾನು ಹೊರೆಯಾಗುತ್ತಿರುವೆನಲ್ಲ ಎಂದು ನನಗೆ ಜುಗುಪ್ಸೆ ಉಂಟಾಯಿತು. ಆ ಸ್ಥಳವನ್ನು ಬಿಟ್ಟು ನನ್ನ ಹಳ್ಳಿಗೆ ಹಿಂತಿರುಗಲು ಕಾತುರನಾದೆ. ನನ್ನ ಮನಸ್ಸಿನ ಸಂಕಲ್ಪವನ್ನು ಅರಿತ ಸ್ವಾಮಿ ಶಾರದಾನಂದರು ಕಳವಳಗೊಂಡರು; ಇನ್ನೂ ಸ್ವಲ್ಪ ಕಾಲ ನಾನು ಅಲ್ಲಿಯೇ ಇದ್ದು ಸಂಪೂರ್ಣ ಗುಣಮುಖವಾಗುವವರೆಗೂ ಚಿಕಿತ್ಸೆ ಪಡೆಯುವಂತೆ ನನ್ನನ್ನು ಒಪ್ಪಿಸಿದರು. ನನ್ನ ಹುಟ್ಟೂರು ಒಂದು ಹಳ್ಳಿ. ಅಲ್ಲಿ ಒಳ್ಳೆಯ ವೈದ್ಯರಾಗಲಿ, ಔಷಧವಾಗಲಿ ದೊರೆಯುತ್ತಿರಲಿಲ್ಲ. ಅಲ್ಲಿಗೆ ಹೋದರೆ, ನನ್ನ ದೇಹಸ್ಥಿತಿ ಇನ್ನೂ ಹದಗೆಡಬಹುದು. ಅದನ್ನು ನಾನು ಅರಿತುಕೊಳ್ಳಲೆಂದೇ ಸ್ವಾಮಿಗಳು ಹೀಗೆ ಕಾತುರರಾದರೆಂದು ನನಗೆ ಕ್ರಮೇಣ ಅರ್ಥವಾಯಿತು. ನನ್ನ ತಂದೆತಾಯಿಗಳು ಮತ್ತು ಬಂಧುಗಳೂ ತೊಂದರೆಗೆ ಒಳಗಾಗಿ ಕಂಗಾಲಾಗುವರು. "ನಮ್ಮ ಹುಡುಗ ಅಲ್ಲಿಗೆ ಹೋದಾಗ ಆರೋಗ್ಯವಾಗಿದ್ದ. ಅವರು ಅವನಿಂದ ದುಡಿಸಿಕೊಂಡು ಅವನಿಗೆ ಕಾಯಿಲೆಯಾದಾಗ ಅವನನ್ನು ಮನೆಗೆ ಅಟ್ಟಿರುವರು" ಎಂದು ಅವರು ಮಠದವರನ್ನು ದೂರಬಹುದು. ಈ ಸಂದರ್ಭವನ್ನು ಸ್ವಾಮಿ ಶಾರದಾನಂದರು ಊಹಿಸಿಯೇ ನನ್ನನ್ನು ಹೋಗದಂತೆ ತಡೆಹಿಡಿದರು. ಈ ಬಗ್ಗೆ ಬೇರೆ ಇತರರು ಕೂಡ ನನಗೆ ಹೇಳಿದರು. ಇದನ್ನು ಕೇಳಿ, ನಾನು ನಾಚಿಕೆಯಿಂದ, ಇಂತಹ ಕರುಣಾಪೂರಿತರಾದ ಮಹಾನುಭಾವರ ಎದುರಿಗೆ ಸಾವು ಬರುವ ಸಂದರ್ಭ ಒದಗಿಬಂದರೂ, ಈ ಸ್ಥಳವನ್ನು ಬಿಟ್ಟು ಹೋಗಬಾರದು ಎಂದು ತೀರ್ಮಾನಿಸಿದೆನು. ಭಗವಂತನ ಕೃಪೆಯಿಂದ ಮತ್ತು ಸ್ವಾಮಿಗಳ ಕರುಣೆ ಹಾಗೂ ಆರೈಕೆಯಿಂದ ನಾನು ಕ್ರಮೇಣ ಗುಣಮುಖವಾಗಿ ಹಿಂದಿನಂತೆ ಆರೋಗ್ಯವಂತನಾದೆನು.

ಬಾಲ್ಯದಲ್ಲಿ ನಾವು ಭಾರತ ರಾಷ್ಟ್ರೀಯ ಸ್ವಾತಂತ್ರ್ಯ ಚಳವಳಿ ಮತ್ತು ಮಾತೃಭೂಮಿಯ ಜಾಗೃತಿ – ಇವುಗಳಿಂದ ಪ್ರಭಾವಿತರಾಗಿದ್ದೆವು. ಸ್ವಾಮಿ ವಿವೇಕಾನಂದರ ಪುಸ್ತಕಗಳನ್ನು ಓದಿ, ನಮ್ಮ ಜೀವನವನ್ನು ಕಷ್ಟದಲ್ಲಿರುವವರ ಸೇವೆಗೆ ಮುಡುಪಾಗಿ ಇಡಲು ನಿರ್ಧರಿಸಿದೆವು. ಸಂನ್ಯಾಸ ಜೀವನದ ಪ್ರಾರಂಭದಲ್ಲಿ ಈ ಆಲೋಚನೆಗಳೇ ನನ್ನ ಹೃದಯದಲ್ಲಿ ಪ್ರಮುಖವಾಗಿದ್ದುವು. ಪೂಜ್ಯ ಸ್ವಾಮಿ ಶಾರದಾನಂದರ ಸಂಪರ್ಕಕ್ಕೆ ಬಂದ ಮೇಲೆ ಒಂದು ದಿನ ಹಿಂದುಳಿದವರ, ಬಡವರ ಸೇವೆ ಅಥವಾ ಯಾವುದಾದರೂ ಸಾಮಾಜಿಕ ಸೇವಾಕಾರ್ಯದಲ್ಲಿ ನಾನು ತೊಡಗಿಕೊಳ್ಳುವ ಬಗ್ಗೆ ಅವರ ಅಭಿಪ್ರಾಯವನ್ನು ಕೇಳಿದೆ. ಅವರು ಪ್ರೀತಿ ವಿಶ್ವಾಸದಿಂದ, "ಮೊದಲು ನಿನ್ನ ನಡತೆಯನ್ನು ಸರಿಯಾಗಿ ರೂಪಿಸಿಕೊ, ಏಕೆಂದರೆ ನಿನ್ನ ನಡತೆ ಪವಿತ್ರವಾಗಿ ಇರದಿದ್ದರೆ ಯಾವ ಒಳ್ಳೆಯ ಕೆಲಸವನ್ನೂ ಮಾಡಲಾಗುವುದಿಲ್ಲ" ಎಂದು ಬುದ್ಧಿಮಾತು ಹೇಳಿದರು.

ಒಮ್ಮೆ ಸ್ವಾಮಿಗಳ ಮುಂದೆ, ಒಬ್ಬ ಜನಪ್ರಿಯ ಧಾರ್ಮಿಕ ಗುರುವಿನ ಬಗ್ಗೆ ಚರ್ಚೆ ನಡೆಯುತ್ತಿತ್ತು. ಅವರಿಗೆ ಭಕ್ತಿಭಾವ ಬರುತ್ತಿತ್ತು. ಆದರೆ ಅವರ ಚಾರಿತ್ರ್ಯ ಚೆನ್ನಾಗಿರಲಿಲ್ಲ. ಮೊದಲು ಮೊದಲು, ಅನೇಕ ಜನ ಅವರತ್ತ ಆಕರ್ಷಿತರಾದರು. ಅನಂತರ, ಅವರ ವೈಯಕ್ತಿಕ ಜೀವನವನ್ನು ಹತ್ತಿರದಿಂದ ನೋಡಿದವರು, ನಿಜ ಸಂಗತಿಗಳನ್ನು ಎಲ್ಲ ಕಡೆ ಹರಡಲಾರಂಭಿಸಿದರು. ಆದರೂ